ಕಲಿಸಿಕೊಟ್ಟಿತು. ನನಗೆ ಆ್ಯಕ್ಟಿಂಗ್ ಕಲಿಸಿದ್ದು ಧಾರಾವಾಹಿ. ಕಿರುತೆರೆಯೇ ನನಗೆ ಸ್ಟೆಪಿಂಗ್ ಸ್ಟೋನ್. ನಟನೆಯ ಜೊತೆಜೊತೆಗೆ ಶೂಟಿಂಗ್‌ನ ತಾಂತ್ರಿಕ ವಿಷಯಗಳನ್ನೂ ಅಲ್ಲಿ ತಿಳಿದುಕೊಂಡೆ. ಧಾರಾವಾಹಿ ನನಗೆ ಜನರ ಪ್ರೀತಿ ಸಿಗುವಂತೆ ಮಾಡಿತು. ನನಗೊಂದು ಗುರುತು ನೀಡಿತು' ಎಂದು ಕಿರುತೆರೆಯೊಂದಿಗಿನ ತಮ್ಮ ಸಖ್ಯವನ್ನು ಹಂಚಿಕೊಳ್ಳುತ್ತಾರೆ.

ಕೌಸ್ತುಭ ಅವರನ್ನು ದೊಡ್ಡತೆರೆಗೆ ಪರಿಚಯಿಸಿದ್ದು 'ರಾಮಾಚಾರಿ 2.0' ಸಿನಿಮಾ. ಸಿನಿಮಾದಲ್ಲಿ ತಮ್ಮ ಪಾತ್ರ ಹೆಚ್ಚು ಹೊತ್ತು ಇರದಿದ್ದರೂ ಅದಕ್ಕೆ ಮಹತ್ವವಿದ್ದು, ಸಿನಿಮಾರಂಗಕ್ಕೆ ಅವಶ್ಯಕವಾದ ಕೆಲವು ಮೂಲ ವಿಷಯಗಳನ್ನು ಕಲಿತುಕೊಳ್ಳಲು ಅವಕಾಶ ನೀಡಿತು ಎನ್ನುತ್ತಾರೆ.

'ರಾಮಾಚಾರಿ 2.0 ಸಿನಿಮಾದಲ್ಲಿ ನನ್ನದು ಮಾರ್ಗರೆಟ್ ಪಾತ್ರ. ಈ ಸಿನಿಮಾ ಶೀರ್ಷಿಕೆ ಕೇಳಿದಾಗ ಒಳಗೊಳಗೆ ಭಯವಾಗಿತ್ತು. ವಿಷ್ಣುವರ್ಧನ್, ಅಂಬರೀಶ್, ಆರತಿ, ನಂತರ ಯಶ್, ರಾಧಿಕಾ ಪಂಡಿತ್ ಅವರಂಥ ಕಲಾವಿದರು ಅಭಿನಯಿಸಿದ್ದ ಸಿನಿಮಾದ ಶೀರ್ಷಿಕೆಯದು. ಹೀಗಾಗಿ ನಾನೇನು ಮಾಡುತ್ತೀನೋ ಎಂಬ ಅಂಜಿಕೆ. ಜನರಿಗೆ ನನ್ನಿಂದ ನಿರಾಸೆಯಾಗಬಾರದು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಅಭಿನಯಿಸಿದೆ' ಎಂದು ಹೇಳುತ್ತಾರೆ.

ಇದೀಗ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ನಿರ್ದೇಶನದ '45' ಸಿನಿಮಾದಲ್ಲಿ ನಟಿಸುವ ಅವಕಾಶ ಕೂಡ ಕೌಸ್ತುಭ ಅವರಿಗೆ ದೊರೆತಿದ್ದು, ಇದರ ಬಗ್ಗೆ ಇನ್ನಷ್ಟು ಖುಷಿ, ಹುಮ್ಮಸ್ಸು ತುಂಬಿಕೊಂಡಿದೆ.

'45 ನನ್ನ ಎರಡನೇ ಸಿನಿಮಾ. ಶಿವರಾಜ್ ಕುಮಾರ್, ಉಪೇಂದ್ರ, ರಾಜ್ ಬಿ. ಶೆಟ್ಟಿ ಅವರಂಥ ದೊಡ್ಡ ನಟರೊಂದಿಗೆ ಅಭಿನಯಿಸುವ ಅವಕಾಶ ಇಷ್ಟು ಬೇಗ ಸಿಕ್ಕಿದೆ. ಇದು ಎಲ್ಲರಿಗೂ ಸಿಗುವಂಥ ಅವಕಾಶವಲ್ಲ. ಈಗಾಗಲೇ ಸಿನಿಮಾ ರಂಗದಲ್ಲಿರುವ ಎಷ್ಟೋ ಮಂದಿ ಇಂಥ ಅವಕಾಶವೊಂದಕ್ಕೆ ಕಾಯುತ್ತಿದ್ದಾರೆ. ನನಗೆ ಇದು ಸಿಕ್ಕಿರುವುದರ ಬಗ್ಗೆ ಖುಷಿ, ಎಕ್ಸೈಟ್‌ಮೆಂಟ್, ಭಯ ಎಲ್ಲವೂ ಆಗುತ್ತಿದೆ' ಎನ್ನುತ್ತಾರೆ.

'45' ಸಿನಿಮಾ ಚಿತ್ರೀಕರಣ ಏಪ್ರಿಲ್ ತಿಂಗಳ ಕೊನೆಯಲ್ಲಿ ಆರಂಭವಾಗಲಿದೆ. ಈ ಸಿನಿಮಾದಲ್ಲಿ ಹೋಮ್ಲಿ, ಬಬ್ಲಿ ಗರ್ಲ್ ಆಗಿ ಕಾಣಿಸಿಕೊಳ್ಳುತ್ತಿರುವ ಕೌಸ್ತುಭ, ಮುಂದೆ ತಾವು ಅಪೇಕ್ಷಿಸುವಂಥ ಪಾತ್ರಗಳ ಕುರಿತೂ ವಿವರಣೆ ನೀಡಿದರು.

'ನನಗೆ ಸಿಗುವ ಪ್ರತಿ ಪಾತ್ರವೂ ಕಲಿಕೆಯ ಹೊಸ ಪಾಠದಂತಿರಬೇಕು. ಮುಂದೆ ಏನು ಎನ್ನುವ ಕುತೂಹಲವನ್ನು ಸದಾ ಉಳಿಸಬೇಕು. ಯಾವ ಪಾತ್ರ ಕೊಟ್ಟರೂ ಎಷ್ಟು ಚೆನ್ನಾಗಿ ಮಾಡ್ತಾಳೆ ಎಂದು ಜನ ಹೇಳಬೇಕು' ಎನ್ನುತ್ತಲೇ, 'ಎಂಥ ಪಾತ್ರ ಕೊಟ್ಟರೂ ನೀರು ಕುಡಿದಂತೆ ಸಲೀಸಾಗಿ ನಿರ್ವಹಿಸುವಂಥ ಗಟ್ಟಿತನ ಬರಬೇಕು. ಅಂಥ ಅವಕಾಶ ಸಿಗಬೇಕು' ಎಂದು ತಮ್ಮ ನಿರೀಕ್ಷೆಗಳನ್ನು ಬಿಡಿಸಿಡುತ್ತಾರೆ. ■



'ಚಿಣ್ಣರ ಚಂದ್ರ' ಸಿನಿಮಾದಲ್ಲಿ ಈಶಾನ್ ಪಾಟೀಲ್, ಆಕಾಂಕ್ಷ ಬರಗೂರು, ಅಭಿನವ್ ನಾಗ್

# ಮಕ್ಕಳಿಗಾಗಿ ಬಂದ ಚಿಣ್ಣರ ಚಂದ್ರ

ಮಕ್ಕಳಿಗೆ ಅಗತ್ಯವಾದ ಶಿಕ್ಷಣ, ಕ್ರೀಡೆ ಮುಂತಾದ ಆಶಯಗಳ ಜೊತೆ ಸಮಾನತೆ, ಸೌಹಾರ್ದತೆಯ ಸಂದೇಶ ನೀಡುವ ಮಕ್ಕಳ ಸಿನಿಮಾವೊಂದು ತೆರೆಕಾಣಲು ಸಿದ್ಧಗೊಂಡಿದೆ.

ಸಾಹಿತಿ ಬರಗೂರು ರಾಮಚಂದ್ರಪ್ಪ ತಮ್ಮ ರಚನೆಯ 'ಅಡಗೂಲಜ್ಜಿ' ಕಾದಂಬರಿ ಆಧರಿಸಿ ಸಿನಿಮಾ ನಿರ್ದೇಶಿಸಿದ್ದು, ಸಿನಿಮಾಗೆ 'ಚಿಣ್ಣರ ಚಂದ್ರ' ಎಂದು ಹೆಸರಿಡಲಾಗಿದೆ. ಈ ಹಿಂದೆ 'ಬಯಲಾಟದ ಭೀಮಣ್ಣ' ಮತ್ತು 'ತಾಯಿ ಕಸ್ತೂರ್ ಗಾಂಧಿ' ಚಿತ್ರಗಳಲ್ಲಿ ನಟಿಸಿದ್ದ ಬರಗೂರರ ಮೊಮ್ಮಗ ಆಕಾಂಕ್ಷ ಬರಗೂರು ಈ ಸಿನಿಮಾದಲ್ಲಿ ಮುಖ್ಯ ಪಾತ್ರ ನಿರ್ವಹಿಸಿದ್ದಾರೆ.

ಆಕಾಂಕ್ಷ ಬರಗೂರು ಜೊತೆ ಈಶಾನ್ ಪಾಟೀಲ್, ನಿಕ್ಷೇಪ್, ಅಭಿನವ್ ನಾಗ್, ಶಡ್ಜ ಹೆಗ್ಡೆ ಮುಂತಾದ ಬಾಲ ಕಲಾವಿದರು ಅಭಿನಯಿಸಿದ್ದಾರೆ. ಹಿರಿಯ ಕಲಾವಿದರಾದ ಸುಂದರರಾಜ್, ರೇಖಾ, ರಾಧಾ ರಾಮಚಂದ್ರ ಅವರಲ್ಲದೆ ರಾಘವ್, ಸುಂದರರಾಜ ಅರಸು, ಹಂಸ, ವೆಂಕಟರಾಜು, ಗೋವಿಂದರಾಜು, ವತ್ಸಲಾ ಮೋಹನ್, ರಾಜಪ್ಪ ದಳವಾಯಿ ತಾರಾಗಣವಿದೆ.

ಜಾನಪದದ ಸುತ್ತ ಸುತ್ತುವ ಈ ಸಿನಿಮಾದಲ್ಲಿ ಅಡಗೂಲಜ್ಜಿ ಪಾತ್ರದ ಮೂಲಕ ಮಕ್ಕಳಿಗೆ ಜನಪದ ಕಥೆಗಳ ಪರಿಚಯವಾಗುತ್ತದೆ. ಊರಿಗೆ ಟೂರಿಂಗ್ ಟಾಕೀಸ್ ಬಂದು ಸಿನಿಮಾಗಳಿಂದ ಜನಪದ ಕಥೆಗಳಿಗೆ ಧಕ್ಕೆ ಬರುತ್ತದೆ ಎಂಬ ಆತಂಕ ಎದುರಾಗುವಾಗಲೇ, ಅಡಗೂಲಜ್ಜಿಯು ಸಿನಿಮಾ ಕಥೆಗಳನ್ನೇ ಜನಪದ ಕಥೆಗಳನ್ನಾಗಿಸಿ ಮಕ್ಕಳು ಹಾಗೂ ಹಿರಿಯರಿಗೆ ಹೇಳುವುದು, ಜಾನಪದ ಆಧುನಿಕ ರೂಪ ಪಡೆಯುತ್ತಿರುವುದನ್ನು ಸಂಕೇತಿಸುತ್ತದೆ.

ಶಿಕ್ಷಣ, ಸಿನಿಮಾ, ಜನಪದ ಕಥನಗಳೊಂದಾಗಿರುವುದು ಈ ಸಿನಿಮಾದ ವೈಶಿಷ್ಟ್ಯ ಎನ್ನಲಾಗಿದೆ.

'ಚಿಣ್ಣರ ಚಂದ್ರ' ಸಿನಿಮಾವನ್ನು ಗೋವಿಂದರಾಜ್ ಅಲಿಯಾಸ್ ಜಿಗಣಿ ರಾಜಶೇಖರ್ ನಿರ್ಮಾಣ ಮಾಡಿದ್ದು, ಬರಗೂರರು ಚಿತ್ರಕಥೆ, ಸಂಭಾಷಣೆ, ಗೀತರಚನೆ ಮಾಡಿ ನಿರ್ದೇಶಿಸಿದ್ದಾರೆ. ಈ ಚಿತ್ರಕ್ಕೆ ಸುರೇಶ್ ಅರಸು ಸಂಕಲನ, ನಾಗರಾಜ ಆದವಾನಿ ಛಾಯಾಗ್ರಹಣ, ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನವಿದೆ. ■